ರೂಪಾಯಿ ಅನಾಹುತಕ್ಕೆ ಯಾರು ಕಾರಣರು? ಆ ಇಂಜಿನಿಯರ್ ರಕ್ಷಣೆ ಮಾಡಬೇಕಾದವನೇ, ಆ ಗರ್ಡರ್ಸ್‌ಗಳನ್ನು ಮಾರುವ ಮಟ್ಟಕ್ಕೆ ಬಂದಿದ್ದಾನೆ. ಈ ಸದನದಲ್ಲಿ ಜವಾಬ್ದಾರಿ ಶಾಸಕನಾಗಿ ನಾನು ನನ್ನ ಕಾರ್ಯನಿರ್ವಹಿಸುತ್ತಿದ್ದೇನೆ. ಇದು ಹೌದೋ ಅಲ್ಲವೋ ತಾವು ಹೇಳಿ. ಕಾಲುವೆ ಏತಕ್ಕೆ ಬಿರುಕು ಬಿಟ್ಟಿದೆ, ಅಲ್ಲಿ ಏನಾಗಿದೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಕಾಲುವೆ ಏತಕ್ಕೆ ಬಿರುಕು ಬಿಟ್ಟಿತು ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ೨ನೇ ತಾರೀಖಿನ ನಂತರ ನೀರು ಕೊಡುತ್ತೇವೆಂದು ಹೇಳಿರುತ್ತೇನೆ. ಇದರ ಬಗ್ಗೆ ಕಮಿಟಿ ಕೂಡಾ ಮಾಡಿ ಬಂದಿದ್ದೇನೆ. ವಿವರವಾದ ವರದಿ ಬಂದ ಮೇಲೆ ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆ ಕಮಿಟಿಯಲ್ಲಿ ಯಾರನ್ನು ಹಾಕಿದ್ದೀರಿ? ಏನು ಸಮಿತಿ ಮಾಡಿರುತ್ತೀರಿ, ತನಿಖಾ ಸಮಿತಿಯೇ, ಆ ಸಮಿತಿಯಲ್ಲಿ ಯಾರು ಯಾರಿದ್ದಾರೆ ಎಂಬುದರ ಬಗ್ಗೆ ಸಮಗ್ರವಾಗಿ ಒಂದು ಹೇಳಿಕೆ ಮಾಡಿ, ಈ ಸದನದಲ್ಲಿ ಮುಚ್ಚಿಡುತ್ತಿದ್ದೀರಿ, ಇದರಿಂದ ಮನಸ್ಸಿಗೆ ಬಹಳ ನೋವಾಗುತ್ತದೆ. ನಿಜವಾಗಿ ಬಹಳ ಭೀಕರವಾದ ಪರಿಸ್ಥಿತಿ ಬಂದಿದೆ. ನೀವು ವಿಚಾರವನ್ನು ಮುಚ್ಚಿಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮುಚ್ಚಿಡುವ ಅವಶ್ಯಕತೆ ಏನೂ ಇಲ್ಲ, ವಿವರವಾದ ವರದಿ ತರಿಸುತ್ತೇನೆ. ಸಮಿತಿಗೆ ಏನು ಕೆಲಸ ಕೊಟ್ಟಿದ್ದೇವೆ, ಅವರು ಏನು ಮಾಡುತ್ತಿದ್ದಾರೆ, ಅದರಲ್ಲಿ ಯಾರ್ಯಾರು ಇದ್ದಾರೆ ಎಂಬ ಬಗ್ಗೆ ದೀರ್ಘವಾದ ವರದಿ ತರಿಸುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ತಾವು ಹೇಳಿದ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಈ ವಿಷಯ ಈಗತಾನೆ ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಕೂಡಾ ವರದಿ ತರಿಸುತ್ತೇನೆ.

ಅಧ್ಯಕ್ಷರು : ಅದನ್ನು ನೋಡಿಸುತ್ತಾರೆ ಬಿಡಿ. ಈಗ ಅರ್ಜಿಗಳನ್ನು ಒಪ್ಪಿಸುವುದು.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ನಾನು ನಿನ್ನೆ ದಿವಸ ತಮಗೆ ನೋಟೀಸ್ ಕಳುಹಿಸಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳ ಬಗ್ಗೆ, ಹಿಂದೆ ಒಂದು ಸಾರಿ ಇಲ್ಲಿ ಮಾನ್ಯ ವಿದ್ಯಾ ಸಚಿವರು ಹೇಳಿಕೆ ಕೊಟ್ಟು ನಾವು ಅದನ್ನು ಸರಿಪಡಿಸುತ್ತೇನೆ, ವಿಚಾರಣೆ ಮಾಡುಸುತ್ತೇನೆ ಎಂಬ ಮಾತನ್ನು ಹೇಳಿದ್ದರು. ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈಗಾಗಲೇ ವಿಚಾರಣೆ ನಡೆದು ಆ ಒಂದು ವರದಿ ಬಂದಿದೆ. ಅದು ರಾಜ್ಯಪಾಲರಿಗೆ ಅಂದರೆ ಪ್ರೋ - ಚಾನ್ಸಲರ್‌ಗೆ ಹೋಗಿದೆ ಎಂಬುದನ್ನು ಮಂತ್ರಿಗಳೂ ಕೂಡಾ ಹೇಳಿದ್ದಾರೆ. ಅದು ಏನಾಯಿತು? ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ವಿದ್ಯಾರ್ಥಿಗಳು ಒಂದು ಕಡೆ, ಅಧ್ಯಾಪಕರ ವರ್ಗದವರು ಒಂದು ಕಡೆ, ಅಲ್ಲಿರತಕ್ಕಂಥ ಉಪಕುಲಪತಿಗಳು ಮತ್ತೊಂದು ಕಡೆ ಹೀಗಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಯಾವ ತರಹದ ಒಂದು ವಾತಾವರಣ ಇರಬೇಕಾಗಿತ್ತು ಅದಿಲ್ಲ.

ಅಧ್ಯಕ್ಷರು : ಅದನ್ನು ಬರೆದು ಕಳುಹಿಸಿಕೊಡಿ

ಶ್ರೀ ಸಿ. ಬೈರೇಗೌಡ : ನಿನ್ನೆ ದಿವಸ ಕಳುಹಿಸಿದ್ದೇನೆ

ಅಧ್ಯಕ್ಷರು : ಅದನ್ನು ನೋಡುತ್ತೇನೆ.

ಶ್ರೀ ಸಿ. ಭೈರೇಗೌಡ : ದಯವಿಟ್ಟು ಇದಕ್ಕೆ ಒಂದು ಹೇಳಿಕೆಯನ್ನು ಕೊಡಿಸಬೇಕು. ಈ ಸದನ ಪ್ರಾರಂಭ ಆದಾಗ ಒಂದು ವಿಚಾರದ ಬಗ್ಗೆ ನಾನು ನೋಟೀಸ್ ಅನ್ನು ಕೊಟ್ಟಿದ್ದೆ.

1.25 ಪಿ.ಎಂ.

ಗಲ್ಬರ್ಗಾದಲ್ಲಿ ಜಿಲ್ಲಾ ಪರಿಷದ್ ಸದಸ್ಯರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರು ಕೊಲೆಯಾಗಿರುವ ಬಗ್ಗೆ

ಗುಲ್ಬರ್ಗಾದಲ್ಲಿ ದಿನಾಂಕ ೧-೬-೯೧ರಲ್ಲಿ ಭೀಕರವಾದ ಕೊಲೆ ನಡೆದಿದೆ. ಹಗಲು ೧೧ ಘಂಟೆ ಸಮಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರಾದ ಶ್ರೀ ಗೌಡಪ್ಪಗೌಡರ ಕೊಲೆ ನಡೆದಿದೆ. ಅವರು ಒಬ್ಬ ಜಿಲ್ಲಾ ಪರಿಷತ್ತು ಸದಸ್ಯರಾಗಿದ್ದು ಮತ್ತು ಒಂದು ಸ್ಥಾಯಿ ಸಮಿತಿ ಅಧ್ಯಕ್ಷರು ಕೂಡ ಆಗಿದ್ದಾರೆ. ಹಗಲು ೧೧ ಘಂಟೆ ಸಮಯದಲ್ಲಿ ಕೊಲೆ ನಡೆದಿದೆ. ಅಪರಾಧಿಗಳನ್ನು ನೋಡಿರತಕ್ಕಂಥವರು ಇದ್ದಾರೆ. ಮತ್ತು ಅವರನ್ನು ಇಲ್ಲಿಯವರೆಗು ಅರೆಸ್ಟ್ ಮಾಡಿಲ್ಲ. ಮತ್ತು ಅವರಿಗೆ ರಕ್ಷಣೆ ಕೊಡತಕ್ಕಂಥ ಪ್ರಯತ್ನ ಕೂಡ ಇವತ್ತು ನಡೆದಿದೆ. ಹಗಲು ೧೧ ಘಂಟೆಯಲ್ಲಿ ಕೊಲೆಯಾಗಿದೆ. ಇದು ಒಬ್ಬ ರಾಜಕೀಯ ಪಕ್ಷದ ಮಖಂಡರನ್ನು ಕೊಲೆ ಮಾಡಿರತಕ್ಕ ವಿಷಯವಾಗಿದೆ. ಇದರ ಬಗ್ಗೆ ಸರ್ಕಾರ ಇನ್ನೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಇದರ ಹಿಂದೆ ಪ್ರಬಲವಾದ ಜನ ಸಾಕಷ್ಟು ಇದ್ದಾರೆ. ಇದರಲ್ಲಿ ಮಾನ್ಯ ಗೃಹ ಮಂತ್ರಿಗಳ ಕೈ ಕಟ್ಟಿದೆ ಎಂದು ನನಗೆ ತಿಳಿದಿದೆ. ಆದ್ದರಿಂದ ಇವತ್ತು ಇದರ ಬಗ್ಗೆ ತೀವ್ರವಾದ ಕ್ರಮವನ್ನು ಮಾನ್ಯ ಗೃಹ ಮಂತ್ರಿಗಳು ತೆಗೆದುಕೊಳ್ಳಬೇಕು. ಇದು ಅವರ ಕೈ ಮೀರಿರುವಂತಹ ಪ್ರಯತ್ನ ನಡೆದಿದೆ. ಇದರ ಬಗ್ಗೆ ಒಂದು ಹೇಳಿಕೆ ಕೊಡುವುದಕ್ಕೆ ದಯವಿಟ್ಟು ತಾವು ಹೇಳಬೇಕು ಮತ್ತು ನಾನು ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತು ಅಲ್ಲಿ ಸಾಕ್ಷಿಗಳು ಏನಿದ್ದಾರೆ ಅವರನ್ನು ಬೆದರಿಸತಕ್ಕಂಥ ಕೆಲಸ ಸಹ ನಡೆಯುತ್ತಿದೆ.

ಅರ್ಜಿಗಳನ್ನೊಪ್ಪಿಸುವುದು

೧) ಶ್ರೀ ಚೌಡರೆಡ್ಡಿ : ಚಿಂತಾಮಣಿಯ ಚಿತ್ರಮಂದಿರಗಳ ಮಾಲೀಕರು ತೆರಿಗೆಯನ್ನು ವಂಚಿಸುತ್ತಿರುವುದರಿಂದ ಪುರಸಭೆಗೆ ಆಗುತ್ತಿರುವ ಆದಾಯ ಖೋತಾದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೨) ಶ್ರೀ ಟಿ.ಬಿ. ಜಯಚಂದ್ರ : ಶಿರಾ ತಾಲ್ಲೂಕು ಭಟ್ಟಿಗನಹಳ್ಳಿ ಗ್ರಾಮದ ಪರಿಶಿಷ್ಟ ಜನಾಂಗಕ್ಕೆ ಮಾದನ ಹಳ್ಳಿಯಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಸಾಗುವಳಿಗೆ ಮಂಜೂರು ಮಾಡುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೩) ಶ್ರೀ ಪ್ರಭಾಕರ ಎಸ್. ರಾಣೆ. ಧಾರವಾಡ ಜಿಲ್ಲೆಯ ಕ್ಯಾರಕೊಪ್ಪ ಮತ್ತು ಚಿಕ್ಕಮಲಗವಾಡ ಗ್ರಾಮಗಳ ಸುತ್ತಮುತ್ತ ನೀಲಗಿರಿ ಮರಗಳನ್ನು ಕಡಿದಿರುವ ಬಗ್ಗೆ ಅರ್ಜಿಯನ್ನೊಪ್ಪಿಸುವುದು.

೪) ಶ್ರೀ ಜಿ.ಎಸ್. ಆಚಾರ್ : ಈ ಕೆಳಕಂಡ ಅರ್ಜಿಗಳನ್ನೊಪ್ಪಿಸುವುದು ಕುಂದಾಪುರ ತಾಲ್ಲೂಕಿನ ಪಡುವರಿ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.